Downloaded From: http://iasexamportal.com

CS (Main) Exam : 2014

C-DRN-N-MBOC

# KANNADA
## (Compulsory)

*Time Allowed : Three Hours*

*Maximum Marks : 300*

## QUESTION PAPER SPECIFIC INSTRUCTIONS

**Please read each of the following instructions carefully before attempting questions :**

All questions are to be attempted.

The number of marks carried by a question is indicated against it.

Answers must be written in **KANNADA (Kannada Script)** unless otherwise directed in the question.

Word limit in questions, wherever specified, should be adhered to and if answered in much longer or shorter than the prescribed length, marks may be deducted.

Any page or portion of the page left blank in the answer book must be clearly struck off.

---

**Q.1. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು 600 ಪದಗಳಲ್ಲಿ ಪ್ರಬಂಧವನ್ನು ಬರೆಯಿರಿ :— 100**

Q. 1(a) ರಾಜಕೀಯದಲ್ಲಿ ಮಹಿಳೆಯ ಪಾತ್ರ.

Q. 1(b) ಚೈನಾದ ಆರ್ಥಿಕ ಬೆಳವಣಿಗೆಯಿಂದಾಗಿ ಭಾರತವು ಭಯಪಡುವ ಅಗತ್ಯವಿದೆಯೇ ?

Q. 1(c) ಭಾರತೀಯ ಸಮಾಜದಲ್ಲಿ ದಾಂಪತ್ಯ ವಿಚ್ಛೇದನವನ್ನು ಕುರಿತಂತೆ ಉಂಟಾಗುತ್ತಿರುವ ಸಮ್ಮತಿಯ ಭಾವನೆ.

Q. 1(d) 'ನೈತಿಕತೆ'ಯನ್ನು ಕಠಿಣವಾದ ಕಾನೂನು ಕ್ರಮದಿಂದ ಜಾರಿಗೊಳ್ಳಿಸಬಹುದೇ ?

**Q.2. ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಕೊನೆಯಲ್ಲಿ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ. ನಿಮ್ಮ ಉತ್ತರಗಳು ನೇರ, ಸ್ಪಷ್ಟ ಮತ್ತು ಸಂಕ್ಷಿಪ್ತವಾಗಿರಲಿ :— 12×5=60**

ಜಾಗತಿಕ ಮಟ್ಟದಲ್ಲಿ ಜನರು ವಲಸೆ ಹೋಗುವುದು ಅನೇಕ ಶತಮಾನಗಳ ಹಿಂದೆಯೇ ಪ್ರಾರಂಭವಾಯಿತು. ಮಾನವರು ಗುಂಪುಗಳಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅನೇಕ ಕಾರಣಗಳಿಗಾಗಿ ವಲಸೆ ಹೋಗಲು ಪ್ರಾರಂಭಿಸಿದರು. ಹುಲ್ಲುಗಾವಲನ್ನು ಹುಡುಕಿಕೊಂಡೋ, ಸಾಗುವಳಿ ಮಾಡಲು ಬೇಸಾಯದ ಭೂಮಿಯನ್ನು ಹುಡುಕಿಕೊಂಡೋ, ಬೇರೊಂದು ಗುಂಪಿನ ಭಯ ಮತ್ತು ಹಿಂಸೆಯಿಂದ ತಪ್ಪಿಸಿಕೊಳ್ಳಲೋ, ಅಥವಾ ಅಭಿವ್ಯಕ್ತಿ, ಮತ್ತು ವೈಯಕ್ತಿಕ ನಂಬಿಕೆಯ ಸ್ವಾಂತ್ರ್ಯವನ್ನು ಹುಡುಕಿಯೋ, ಅಥವಾ ಕೇವಲ ಅಲೆದಾಟದ ತೀವ್ರಬಯಕೆಯೋ–ಹೀಗೆ ಅನೇಕ ಕಾರಣಗಳು ವಲಸೆಯ



Downloaded From: http://iasexamportal.com

Downloaded From: http://iasexamportal.com

ಹಿಂದೆ ಇದ್ದಿರಬೇಕು. ವಲಸೆಗಾರರು ತಮ್ಮ ಜೊತೆಗೆ, ಅವರ ಸಾಂಸ್ಕೃತಿಕ ನೆನಪುಗಳನ್ನು ಹೊತ್ತುತಂದು, ಅವುಗಳನ್ನು ಹೊಸ ಸ್ಥಳದಲ್ಲಿ ಬಿತ್ತುವ ಕೆಲಸವನ್ನು ಮಾಡುತ್ತಾರೆ. ತಮ್ಮ ವಲಸೆಯ ದಾರಿಯಲ್ಲಿ ಎದುರಾಗುವ ಬೇರೆಯ ಬುಡಕಟ್ಟುಗಳ ಜೊತೆಗೆ ಯುದ್ಧದ ಮೂಲಕವೋ, ವ್ಯಾಪಾರದ ಮೂಲಕವೋ, ಅಥವಾ ಮದುವೆ, ಅಥವಾ ತಮ್ಮ ನಡುವಣ ಸಾಮಾನ್ಯವಾಗಿರುವ ಉದ್ಯಮದ ಕಾರಣದಿಂದಲೋ. ಒಂದು ಸಂಬಂಧವನ್ನು ಈ ವಲಸೆಯ ಗುಂಪು ಮಾಡಿಕೊಳ್ಳುವುದುಂಟು. ಪ್ರಾರಂಭದಲ್ಲಿ, ಇಂಥ ಸಂದರ್ಭಗಳಲ್ಲಿ ಒಂದು ಆತಂಕಕಾರಿ, ಬಿಗಿಯಾದ ವಾತಾವರಣ ಇರುತ್ತದೆ. ಆದರೆ ಕ್ರಮೇಣ ಇದು ತಿಳಿಯಾಗುತ್ತ. ಶಾಂತಿಯು ಆವರಿಸುತ್ತದೆ. ಈ ಶಾಂತಿಯ ಕಲಾ, ಕುಸುರಿಗಳು ಕ್ರಮೇಣ ಮೈದಳೆಯುತ್ತವೆ. ಕೊಡು–ಕೊಳ್ಳುವಿಕೆಯು ಸಂಬಂಧದ ವಿನ್ಯಾಸವಾಗಿ ಮಾರ್ಪಡುತ್ತದೆ. ಒಂದು ಸ್ವತಂತ್ರ ವಾತಾವರಣದಲ್ಲಿ, ಯಾವುದೇ ಒಂದು ಸಂಸ್ಕೃತಿಯ ಯಜಮಾನ್ಯ; ಇಲ್ಲದಿದ್ದಾಗ, ಪ್ರತಿಯೊಂದು ಗುಂಪು, ಬಹುಮುಖೀ ಸಮಾಜವಾಗಿ ಬೆಳೆಯುತ್ತದೆ. ಹೀಗೆಯೇ ಮಂಗೋಲಿಯದ ಜನಸಮ್ಮುದಾಯ ಅಲಾಸ್ಕಾಗೆ ಹೋಗಿರಬೇಕು, ಹೀಗೆಯೇ, ಆಂಗ್ಲೋ–ಸಾಕ್ಸಾನರು ಬ್ರಿಟನ್‌ಗೆ ಹೋಗಿದ್ದಿರಬೇಕು, ಇದೇ ಬಗೆಯಲ್ಲಿ, ಮೊಸೆಸ್‌ನು, ಆಯ್ದ ಜನರನ್ನು ಹೊಸ ನಿಯಮಗಳ ಭೂಮಿ ಅಥವಾ 'ಮಾತುಕೊಟ್ಟ ಭೂಮಿ'ಯ ಹುಡುಕಾಟದಲ್ಲಿ ಕರೆದುಕೊಂಡು ಹೋಗಿರಬೇಕು. ಇದೇ ರೀತಿಯಲ್ಲೇ, ಕೊಲಂಬಸ್‌ನು ಯುರೋಪಿನ ರಾಷ್ಟ್ರಗಳನ್ನು ಜಾಗತಿಕ ಸಾಹಸಕ್ಕಾಗಿ ಪ್ರಮಾಣ ಹೊರಡಿಸಿರಬೇಕು, ಇಂಥ ಸಂದರ್ಭದಲ್ಲಿ ವಸಾಹತೀಕರಣವು ಉಳಿದ ದೇಶಗಳನ್ನು ಹಾಗೂ ಅವುಗಳ ಸಂಸ್ಕೃತಿಯನ್ನು ತಮ್ಮ ಆಧಿಪತ್ಯಕ್ಕೆ ವಶ ಮಾಡಿಕೊಳ್ಳುವ ಒಂದು ಸಾಧನವೂ, ವಿಧಾನವೂ ಆಯಿತು. ಇವತ್ತಿನ ದಿನಗಳಲ್ಲಿ ವ್ಯಾಪಾರ–ವಹಿವಾಟುಗಳು, ಜನಸಮುದಾಯಗಳು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಅಸಂಖ್ಯ ಸಂಖ್ಯೆಯಲ್ಲಿ ವಲಸೆ ಹೋಗುವುದರ ಹಿಂದೆ ಪ್ರಧಾನವಾದ ಪಾತ್ರವನ್ನು ವಹಿಸಿವೆ. ಇವೆಲ್ಲವೂ ಸಾಂಸ್ಕೃತಿಕ–ಸಮ್ಮಿಶ್ರಣದ ಉದಾಹರಣೆಗಳಾಗಿವೆ. ಪ್ರತಿಯೊಂದು ಗುಂಪೂ ಸಹ ತನ್ನ ಪ್ರಾಚೀನ ಗುರುತು, ನೆನಪುಗಳನ್ನು ಸ್ವಲ್ಪ ಕಾಲದ ಮಟ್ಟಿಗೆ, ಅಂದರೆ ಒಂದು ಅಥವಾ ಎರಡು ತಲೆಮಾರಿನವರೆಗೆ ಇಟ್ಟುಕೊಂಡಿರುತ್ತದೆ. ನಂತರ ಕ್ರಮೇಣ ತನ್ನ ಹಳೆಯ ಸಂಬಂಧಗಳ ಕುರುಹುಗಳು ಕಡಿಮೆಯಾಗುತ್ತ ಹೋಗುತ್ತವೆ. ಮುಂದಿನ ಒಂದು ಶತಮಾನಗಳಲ್ಲಿ ಬಹುಶಃ ಜಗತ್ತಿನ ಜನಸಮುದಾಯ ತನ್ನ ಹಳೆಯ ಪ್ರಾದೇಶಿಕ ಸಂಬಂಧಗಳನ್ನು ಗಟ್ಟಿಯಾಗಿ ಇಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ಭವಿಷ್ಯನುಡಿಯಬಹುದಾಗಿದೆ. ನೀವು ಯಾವ ಕಾಲದಲ್ಲಿ, ಯಾವ ಪ್ರದೇಶದಲ್ಲಿ ಇರುತ್ತೀರಿ, ಅದೇ ನಿಮ್ಮ ಸ್ಥಳ ಆಗುತ್ತದೆ. ಈ ಹೊಸ ಜಾಗದ ಪರಿಸರಕ್ಕೆ ನೀವು ಹೊಂದಿಕೊಳ್ಳುತ್ತೀರಿ; ಸ್ಥಳೀಯವು, ಜಾಗತೀಕರಣದಲ್ಲಿ ಸಂಯೋಗಗೊಳ್ಳುತ್ತದೆ. ತಮ್ಮ ಹಳೆಯ ಕುರುಹುಗಳನ್ನು ಉಳಿಸಿಕೊಳ್ಳುವವರು ಕೆಲವೇ ಕೆಲವು ಜನ. ಈ ಹೊಸ ಸ್ಥಳಾಂತರ ಎಲ್ಲ ಕಡೆಯಲ್ಲಿಯೂ ವ್ಯವಸ್ಥೆಯನ್ನು ಬದಲಾಯಿಸುತ್ತದೆ. ಈಗಾಗಲೇ ಬದಲಾಗಿರುವ ಹೊಸ ತಲೆಮಾರುಗಳು ಮುನ್ನೋಟ ಉಳ್ಳವರಾಗಿರುತ್ತಾರೆ. ಹಳೆಯ ಗುರುತುಗಳನ್ನು, ಹಳಹಳಿಕೆಯ ಭಾವನಾತ್ಮಕತೆಯನ್ನು ಮೀರಿರುತ್ತಾರೆ. ಯಾವುದೇ ಗಂಡು–ಅಥವಾ ಹೆಣ್ಣು ಅಥವಾ ಸಂಸ್ಕೃತಿ ಏಕಾಂಗಿತನದಲ್ಲಿ ಬಹಳದಿನ ಉಳಿಯುವುದಿಲ್ಲ. ಹಳೆಯ ಆಕರ್ಷಣೆ ಮತ್ತು ಹೊಸ ಆಕರ್ಷಣೆಯ ನಡುವಣ ಶಕ್ತಿಗಳ ಜಗ್ಗಾಟವು ಸ್ವಲ್ಪದಿನಗಳ ಮಟ್ಟಿಗೆ ಇರುವುದುಂಟು. ಅಸಂಖ್ಯಾತ ತಲೆಮಾರುಗಳು ತಮ್ಮ ಹಳೆಯ ನಂಬಿಕೆಗಳ ಗಟ್ಟಿತನದಿಂದ ಹೊರಗಿನ ಎಲ್ಲ ಪ್ರಭಾವಗಳನ್ನು ಎದುರಿಸಿದ, ವ್ಯಕ್ತಿತ್ವಗಳನ್ನು ಕಟ್ಟಿಕೊಳ್ಳಬೇಕೆಂದು ಅವಿರತ ಪ್ರಾರ್ಥನೆಯಂತೆ ಶ್ರಮವಹಿಸಿದ್ದರೂ, ಅವುಗಳು, ಏಕಕಾಲದಲ್ಲಿ ಸೂಕ್ಷ್ಮವೂ, ಬಲಹೀನವೂ, ಟೊಳ್ಳೂ ಆಗಿರುತ್ತವೆ ಅಷ್ಟೇ ಅಲ್ಲ; ಅನಪೇಕ್ಷಿತವಾದ ಹೊಸ ಪ್ರತಿಕ್ರಿಯೆ, ಸಂವಾದಗಳಿಗೆ ಅವು ಪ್ರತಿಕ್ರಿಯಿಸುತ್ತವೆ. ಏಕಕಾಲದಲ್ಲಿ ಸ್ವತಂತ್ರವೂ, ಅವಲಂಬಿತವೂ ಆಗಿರುತ್ತವೆ. ವಂಶವಾಹಿನಿಗಳು, ಡಿ.ಎನ್.ಎ, ಮತ್ತು ಆರ್.ಎನ್.ಎ.ಗಳು ಎಷ್ಟರ ಮಟ್ಟಿಗೆ ಜೋಡಣೆಯಾಗಿದ್ದಾವೆ ಅಂದರೆ ಪ್ರತಿಯೊಂದು ನರನಾಡಿಯೂ ಹಿಂದೆ ಏನಾಗಿದೆ ಎನ್ನುವುದನ್ನು ನೆನಪಿನಲ್ಲಿ ಇಟ್ಟಿರುತ್ತದೆ; ದೇಹ, ಮನಸ್ಸು ಮತ್ತು ಆತ್ಮಗಳು ಬೇರೆಯರು ಏನು ಚಿಂತಿಸುತ್ತಾರೆ, ಹೇಳುತ್ತಾರೆ ಮತ್ತು ಮಾಡುತ್ತಾರೆ



Downloaded From: http://iasexamportal.com

Downloaded From: http://iasexamportal.com

ವನ್ನುವುದರ ಬಗ್ಗೆ ಭಾವುಕವಾಗಿರುತ್ತವೆ. ಅಜ್ಞಾನವು ಭಯವನ್ನು ಹುಟ್ಟಿ ಹಾಕುತ್ತದೆ, ಭಯವು ತಿರಸ್ಕಾರವನ್ನು ಹುಟ್ಟಿಸುತ್ತದೆ, ತಿರಸ್ಕಾರವು ಆತ್ಮ ಪ್ರತ್ಯಯವನ್ನು ನಾಶಮಾಡುತ್ತದೆ. ಇದು ನಾಶ ಮತ್ತು ಸಾವಿಗೆ ದಾರಿಮಾಡುತ್ತದೆ. ಬಹು ಹಿಂದೆ ಅನೇಕ ಪ್ರಾಚೀನ ಸಂಸ್ಕೃತಿಗಳು ಇದೇ ಬಗೆಯ ಅಂತ್ಯಕ್ಕೆ ಗುರಿಯಾಗಿರಬೇಕು. ಬದುಕಲು ಇನ್ನೊಂದನ್ನು ಹೀರಿಕೊಳ್ಳಬೇಕು; ಆ ಇನ್ನೊಂದು ನರಕವಾಗಿದ್ದರೂ ಸರಿಯೇ.

**ಪ್ರಶ್ನೆಗಳು :**

Q.2. (a) ವಲಸೆ ಹೋದ ಜನ ಸಮುದಾಯಗಳು, ಹೊಸ ಸ್ಥಳದಲ್ಲಿ ಆ ಸ್ಥಳದ ಜನರ ಜೊತೆಗೆ ಮೊದಲು ಹೇಗೆ ಪ್ರತಿಕ್ರಯಿಸುತ್ತವೆ? 12

Q.2. (b) ಪ್ರಾಚೀನ ಕಾಲದಲ್ಲಿ ಜನರು ವಲಸೆ ಹೋಗುತ್ತಿದ್ದುದರ ಕಾರಣಗಳು ಏನಿದ್ದವು ? ಆಗಿನ ವಲಸೆಗೆ ಇದ್ದ ಕಾರಣಗಳಿಗೂ, ಈಗಿನ ವಲಸೆಯ ಕಾರಣಗಳಿಗೂ ಇರುವ ವ್ಯತ್ಯಾಸವೇನು ? 12

Q.2. (c) ಸಂಸ್ಕೃತಿಗಳು ಒಂದರೊಳಗೊಂದು ಸಂಯೋಗಗೊಳ್ಳುವುದು ಹೇಗೆ ? 12

Q.2. (d) ಅನೇಕ ಪ್ರಾಚೀನ ಸಂಸ್ಕೃತಿಗಳು ಅಂತ್ಯಗೊಂಡಿದ್ದು ಹೇಗೆ ? 12

Q.2. (e) ಸಂಸ್ಕೃತಿಯು ಏಕಾಂಗಿಯಾಗಿರಲು ಸಾಧ್ಯವಿಲ್ಲವೆಂದು ಈ ಗದ್ಯಭಾಗದ ಬರಹಗಾರನು ಏಕೆ ಹೇಳುತ್ತಾನೆ ? 12

**Q.3. ಕೆಳಗಿನ ವಾಕ್ಯ ವೃಂದವನ್ನು ಅದರ ಮೂರನೇ ಒಂದು ಭಾಗಕ್ಕೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಇದರ ಶೀರ್ಷಿಕೆಯನ್ನು ಸೂಚಿಸುವ ಅವಶ್ಯಕತೆ ಇಲ್ಲ :- 60**

ನಾವು ಕೆಲಸಕ್ಕೆ ಅರ್ಜಿ ಹಾಕುವಾಗ ಸ್ವ–ವಿವರವನ್ನು ಕೊಡುತ್ತೇವೆ. ಅದರಲ್ಲಿ ನಮ್ಮ ಅನುಭವದಲ್ಲಿ ಒಳ್ಳೆಯದನ್ನೇ ಆಯುತ್ತೇವೆ, ನಮ್ಮ ಹಿನ್ನೆಲೆ ಮತ್ತು ನಮ್ಮ ಬಗ್ಗೆ ಬರೆಯುತ್ತೇವೆ. ಬಹಳ ಜನರು ತಮ್ಮ ವೃತ್ತಿ ಜೀವನದಲ್ಲಿ ಎದುರಿಸಿದ ತೊಂದರೆಗಳನ್ನು ಮುಚ್ಚಿಟ್ಟು, ಕೇವಲ ಸಾಧನೆಗಳ ಬಗ್ಗೆ ಮಾತ್ರ ಬರೆಯುತ್ತಾರೆ. ಕೆಲಸ ಕೊಡುವ ಯಜಮಾನರು, ಇಂಥ ಸ್ವ–ವಿವರವನ್ನು ಓದಿದಾಗ, ಪ್ರತಿಯೊಬ್ಬನೂ ಜಗತ್ತಿನ ಶ್ರೇಷ್ಠ ವ್ಯಕ್ತಿಯೆಂಬಂತೆ ತೋರುವ ಹಾಗೆ ಬರೆದಿದ್ದಾನಲ್ಲ ಎಂದು ಭಾವಿಸುತ್ತಾರೆ. ನಮ್ಮನ್ನು ನಾವು, ಕೆಲಸ ಪಡೆಯಲು, ಒಳ್ಳೆಯ ಬೆಳಕಿನಲ್ಲೇ ಕಾಣಲು ಬಯಸುತ್ತೇವೆ. ಇದು ಜಗತ್ತಿನ ನಡೆಯ ಪರಿಚಿತವಾದ ವಿಧಾನವಾಗಿದೆ.

ಈ ಸಂಬಂಧದಲ್ಲಿ ಕ್ರೀಡಾ ಜಗತ್ತಿನ ನಿಜವಾದ ಘಟನೆಯೊಂದು ಹೀಗಿದೆ. ವಿಶ್ವವಿದ್ಯಾಲಯದ ಫುಟ್‌ಬಾಲ್ ತಂಡವೊಂದು ತನ್ನನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಓಟದ ಅಭ್ಯಾಸ ನಡೆಸುತ್ತಿತ್ತು. ತಂಡದ ಒಬ್ಬ ಆಟಗಾರ 'ಲೈನ್‌ಮ್ಯಾನ್' ಜಾಗದಲ್ಲಿ ಇದ್ದ. ಈ ಆಟಗಾರ ಇಡೀ ತಂಡದಲ್ಲಿಯೇ ವೇಗವಾಗಿ ಪ್ರತಿಕ್ರಯಿಸುವ 'ಲೈನ್‌ಮ್ಯಾನ್' ಎಂದು ಪರಿಗಣಿತನಾಗಿದ್ದ. ಒಂದು ದಿನ ಇವನು ತನ್ನ ಕೋಚ್‌ನ ಹತ್ತಿರ ಹೋಗಿ ತಾನೂ ವೇಗವಾಗಿ ಓಡುವ ತಂಡದ 'ಬ್ಯಾಕ್' ಓಟಗಾರರ ಜೊತೆಗೆ ಓಡಬಹುದೇ ಎಂದು ಕೇಳಿದ. ಇವನ ಕೋಚ್ ಇವನಿಗೆ ಅನುಮತಿ ಕೊಟ್ಟ.

ಈ 'ಲೈನ್‌ಮ್ಯಾನ್' ದಿನವೂ ಓಟಗಾರರ ಜೊತೆಗೆ ಓಡುತ್ತಿದ್ದ; ಆದರೆ ಓಟದಲ್ಲಿ ಕೊನೆಯಲ್ಲಿ ಬರುತ್ತಿದ್ದ. ನಂತರ ವೇಗವಾಗಿ ಓಡುವ ಓಟಗಾರರನ್ನು ಹಿಂದಕ್ಕಿಟ್ಟುಕೊಂಡು ಇವನು ಓಡಲು ಪ್ರಾರಂಭಿಸಿ ಸೋಲುತ್ತಿದ್ದ. ಈ ಸೋಲು ಸಹಜವಾಗೇ ಇತ್ತು. ಏಕೆಂದರೆ 'ಲೈನ್‌ಮ್ಯಾನ್'ಗಳು ಓಡುವ ಓಟಗಾರರಷ್ಟು ವೇಗವಾಗಿ ಓಡಲು ಸಾಧ್ಯವೇ ಇರಲಿಲ್ಲ.

ಕೋಚ್‌ಗೆ ಇವನ ವರ್ತನೆ ವಿಚಿತ್ರ ಅನ್ನಸಿ ತನ್ನೊಳಗೆ ತಾನೇ ಕೇಳಿ ಕೊಂಡ: "ಈ ಫುಟ್‌ಬಾಲ್ ಆಟಗಾರ ಯಾಕೆ ಶ್ರೇಷ್ಠ ಓಟಗಾರರ ಜೊತೆಗೆ ಸ್ಪರ್ಧಿಸಿ ಸೋಲುತ್ತಾನೆ ? ಲೈನ್‌ಮ್ಯಾನ್‌ಗಳ ಜೊತೆಗೆ ಸ್ಪರ್ಧಿಸಿದರೆ ಇವನು ವೇಗವಾಗಿ ಓಡಿ ಗೆಲುವು ಗಳಿಸಬಹುದಲ್ಲ ?"



Downloaded From: http://iasexamportal.com

Downloaded From: http://iasexamportal.com
ಕೋಚ್ ಈ ಆಟಗಾರನನ್ನು ಗಮನಿಸುತ್ತ ಇದ್ದು, ಅನೇಕ ದಿನಗಳು ಇವನು ಸೋಲುವುದನ್ನು ಕಂಡು, ಒಂದು ದಿನ ಆಟಗಾರನನ್ನು 'ಲೈನ್‌ಮ್ಯಾನ್'ಗಳ ಜೊತೆ ಸ್ಪರ್ಧಿಸಿ ಗೆಲ್ಲುವ ಅವಕಾಶ ಇರುವಾಗ, ಅದನ್ನು ಬಿಟ್ಟು ತಂಡದ 'ಬ್ಯಾಕ್ ಓಟಗಾರರ' ಜೊತೆಗೆ ಸ್ಪರ್ಧಿಸಿ ಸೋಲುವುದನ್ನು ಯಾಕೆ ಆಯ್ದುಕೊಳ್ಳುತ್ತಿದ್ದೀಯ' ಎಂದು ಕೇಳಿದ.

ಫುಟ್‌ಬಾಲ್ ಆಟಗಾರ ಹೇಳಿದ ಉತ್ತರ ತಂಡದ ಕೋಚ್‌ಗೆ ಆಶ್ಚರ್ಯವನ್ನು ಉಂಟುಮಾಡಿತು. ಈ ತರುಣ ಆಟಗಾರ ಹೇಳಿದ: "'ಲೈನ್‌ಮ್ಯಾನ್'ಗಳ ಜೊತೆಗೆ ಸ್ಪರ್ಧಿಸಿ ಗೆಲ್ಲಲಿಕ್ಕಾಗಿ ನಾನು ಓಡುತ್ತಿಲ್ಲ; ಏಕೆಂದರೆ ಇವರ ಜೊತೆ ಸ್ಪರ್ಧಿಸಿದರೆ ನಾನು ಗೆಲ್ಲುತ್ತೇನೆ ಎಂದು ನನಗೆ ಗೊತ್ತು. ನಾನು ಹೇಗೆ ಹೆಚ್ಚು ಜೋರಾಗಿ ಓಡಬಲ್ಲೆ ಎನ್ನುವುದನ್ನು ಕಲಿಯಬೇಕಾಗಿದೆ. ನಾನು ದಿನವೂ 'ಬ್ಯಾಕ್' ಓಟಗಾರರ ಜೊತೆಗೆ ದಿನ ಕಳೆದಂತೆ ಸ್ವಲ್ಪವೇ ಅಂತರದಲ್ಲಿ ಸೋಲುತ್ತಿದ್ದೇನೆ ಎನ್ನುವುದನ್ನು ನೀವು ಗಮನಿಸಿದ್ದೀರಾ, ಸರ್!"

ಈ ಘಟನೆ ನಮ್ಮ ಆಧ್ಯಾತ್ಮದ ಬೆಳವಣಿಗೆಯ ಒಳಗುಟ್ಟಾಗಿದೆ. ದಿನನಿತ್ಯದ ನಮ್ಮ ಲೌಕಿಕ ಕೆಲಸದಲ್ಲಿ ನಾವು ಯಾವಾಗಲೂ ಶ್ರೇಷ್ಠರಾಗಿ ಕಾಣಿಸುವಂತೆ ಇರುತ್ತೇವೆ. ಆದರೆ ಆಧ್ಯಾತ್ಮದ ಕೆಲಸದಲ್ಲಿ ನಾವು ಏನು ಎನ್ನುವುದನ್ನು ದೈವದಿಂದ ಮುಚ್ಚಿಡಲು ಸಾಧ್ಯವಿಲ್ಲ. ನಮ್ಮ ಬೆಳವಣಿಗೆ ಎನ್ನುವುದು ದೈವದ ಮುಂದೆ ತೆರೆದು ಇಟ್ಟ ಪುಸ್ತಕ ಇದ್ದ ಹಾಗೆ. ಆಧ್ಯಾತ್ಮದ ಬೆಳವಣಿಗೆಯಲ್ಲಿ ನಮಗೆ ಒದಗುವ ಮುನ್ನಡೆ ನಮ್ಮ ಪ್ರಾಮಾಣಿಕ ಪ್ರಯತ್ನವನ್ನು ಅವಲಂಬಿಸಿದೆ. ನಮ್ಮ ಪರಮಾರ್ಥದ ಲಾಭ-ನಷ್ಟದ ಸತ್ಯವನ್ನು ನಮ್ಮ ಸೃಷ್ಟಿಕರ್ತನ ಮುಂದೆ ಮುಚ್ಚಿಡಲು ಸಾಧ್ಯವಿಲ್ಲ.

ಫುಟ್‌ಬಾಲ್ ಆಟಗಾರನಿಗೆ ತನ್ನ ಹಿಂದಿನ ವೈಭವದ ಮೇಲೆ ಬೆಳವಣಿಗೆ ಯಾಗುವುದು ಸಾಧ್ಯವಿಲ್ಲವೆಂದು ಗೊತ್ತಿತ್ತು. ತನಗೆ ತಾನು ಸವಾಲು ಹಾಕಿಕೊಳ್ಳುವುದರ ಮೂಲಕವೇ ತಾನು ಸುಧಾರಿಸಬಲ್ಲೆನೆಂದು ಅವನು ಕಂಡುಕೊಂಡಿದ್ದ. ಓಟದಲ್ಲಿ ತನ್ನ ಬಲಹೀನತೆಯನ್ನು ಕಂಡುಕೊಂಡು, ಅದನ್ನು ಸುಧಾರಣೆಗೆ ತರುವ ಕೆಲಸ ಮಾಡುವುದರ ಮೂಲಕ ಗೆಲ್ಲುವ ಕಡೆಯ ದಾರಿಯನ್ನು ಅವನು ಗುರುತಿಸಿಕೊಂಡಿದ್ದ. ತನಗಿಂತ ಶ್ರೇಷ್ಠವಾದವರ ವಿರುದ್ಧ ತನ್ನನ್ನು ಸ್ಪರ್ಧೆಗೆ ಇಳಿಸಿಕೊಂಡು, ತಾನು ಯಾವ ವಲಯದಲ್ಲಿ ಸುಧಾರಿಸಬಹುದು ಎಂದು ಅವನು ಕಂಡುಕೊಂಡಿದ್ದ. ತನ್ನ ದೌರ್ಬಲ್ಯತೆಯನ್ನು ದಾಟುವುದರ ಕಡೆಗೆ ಅವನು ಸಾಧನೆ ಮಾಡುತ್ತಿದ್ದನೇ ಹೊರತು ಹೊಗಳಿಕೆ ಅಥವಾ ಚಪ್ಪಾಳೆಗಳ ಸಲುವಾಗಿ ಅಲ್ಲ.

ಫುಟ್‌ಬಾಲ್ ಆಟಗಾರನಿಗೆ ಉಳಿದ ಓಟಗಾರರು ಏನು ಪ್ರಯತ್ನ ಮಾಡುತ್ತಿದ್ದರು ಎನ್ನುವುದು ಗೊತ್ತಾಗುತ್ತಿತ್ತು. ಈ ಮೂಲಕ ಅವನು ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಪ್ರತಿ ಸೋಲೂ ಅವನಿಗೆ ಸುಧಾರಿಸಿಕೊಳ್ಳುವುದು ಹೇಗೆ ಎನ್ನುವುದನ್ನು ತೋರಿಸುತ್ತಿತ್ತು. ನಮ್ಮ ಸೋಲುಗಳನ್ನು ನಾವು ಸೂಕ್ಷ್ಮವಾಗಿ ನೋಡಿಕೊಂಡಾಗ, ಪ್ರತಿನಿತ್ಯವೂ ನಾವು ಎಲ್ಲಿ ಸುಧಾರಿಸಿಕೊಳ್ಳಬಹುದು ಎನ್ನುವುದು ಗೊತ್ತಾಗುತ್ತದೆ. ಪ್ರಯತ್ನಗಳ ಮೂಲಕ ನಮ್ಮ ಸೋಲುಗಳು ಹಿಂದಿನ ದಿನಕ್ಕಿಂತ ಕಡಿಮೆಯಾಗುತ್ತ ಬರುತ್ತವೆ. ಕೊನೆಗೆ ನಾವು 'ಶೂನ್ಯ' ಸೋಲುಗಳ ಒಂದು ಘಟ್ಟವನ್ನು ಅಂತಿಮವಾಗಿ ತಲುಪುತ್ತೇವೆ.

ನಾವು ನಮ್ಮ ಸೋಲುಗಳನ್ನು ಎಲ್ಲವನ್ನು ನೋಡಬಲ್ಲ ದೈವದಿಂದ ಮುಚ್ಚಿಡಲು ಸಾಧ್ಯವಿಲ್ಲ. ನಮ್ಮ ಸೋಲನ್ನು ದಾಟುವುದಕ್ಕಾಗಿ ಪ್ರಾಮಾಣಿಕ ಪ್ರಯತ್ನಗಳನ್ನು ನಮ್ಮಿಂದ ದೈವ ಇಚ್ಛಿಸುತ್ತದೆ. ಎಷ್ಟೇ ಕಠಿಣವಾದ ಪರಿಶ್ರಮವಾದರೂ ನಮ್ಮ ಪ್ರಯತ್ನವು ಪ್ರಾಮಾಣಿಕವಾಗಿದ್ದರೆ, ದೈವವು ನಮ್ಮ ಪ್ರಾಮಾಣಿಕ ಪರಿಶ್ರಮವನ್ನು ಗುರುತಿಸುತ್ತದೆ. ದೈವವು ನಂತರ ಪ್ರೀತಿಯಿಂದ ಇದಕ್ಕೆ ಪ್ರತಿಕ್ರಯಿಸುತ್ತದೆ. ನಾವು ಇನ್ನೂ ಕಷ್ಟಪಡುತ್ತಿದ್ದರೆ, ನಮಗೆ ದೈವದ ಸಹಾಯ ದೊರೆಯುತ್ತದೆ. ನಮ್ಮ ಸೋಲುಗಳನ್ನು ಮೆಟ್ಟಿನಿಲ್ಲಲು, ಅವುಗಳನ್ನು ಕಿತ್ತೊಗೆದು, ಬೆಳವಣಿಗೆಯನ್ನು ಮಾಡುವ ನಮ್ಮ ಕ್ರಿಯೆಯಲ್ಲಿ ದೈವವು ವೇಗವರ್ಧಕವಾಗಿ ನಿಲ್ಲುತ್ತದೆ. **(460 Words)**



Downloaded From: http://iasexamportal.com

Downloaded From: http://iasexamportal.com

**Q. 4.** ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಅನುವಾದಿಸಿರಿ :- **20**

Most people involved in the film production industry know that there is a constant evolution. The change is in the way movies are made, discovered, marketed, distributed, shown, and seen. Following independence in 1947, the 1950s and 60s are regarded as the 'Golden Age' of Indian cinema in terms of films, stars, music and lyrics. The genre was loosely defined, the most popular being 'socials', films which addressed the social problems of citizens in the newly developing state. In the mid-1960s, camera technology revolutionized the documentary method by enabling the synchronized recording of image and sound. Today, CINEMA 4D users are free to create scenes without worrying about the size of objects or how many objects are in the scene, shaded settings, texture size, multipass-rendering or eye-catching particle systems.

Until the 1960s, film-making companies, many of whom owned studios, dominated the film industry. Artistes and technicians were either their employees or were contracted on a long-term basis. Since the 1960s, however, most performers went the freelance way, resulting in the star system and huge escalations in film production costs. Financing deals in the industry also started becoming murkier and murkier, since then. According to estimates, the Indian film industry has an annual turnover of Rs. 60 billion. It employs more than 6 million people, most of whom are contract workers as opposed to regular employees. In the late 1990s, it was recognized as an industry.

More money impacted the perception, visual representation, and definitions of reality. Like any other media of mass communication, the themes are relevant to their times.

Thus, filmmaking became more expensive and riskier. As opposed to the time of the Gemini studios, when only 5 percent of a movie was shot outdoor, filmmakers often select overseas locations in order to create greater realism, manage costs more efficiently or source people and props. Filmmakers spend considerable time scouting for the perfect location.

**Q. 5.** ಕೆಳಗಿನ ಗದ್ಯಭಾಗವನ್ನು ಇಂಗ್ಲೀಷಿಗೆ ಅನುವಾದ ಮಾಡಿ :- **20**

ಹಸ್ಯವು, ತಮಾಷೆಯ ಭಾವನೆಗಳನ್ನು ಉಕ್ಕಿಸುವ ಜನರ, ವಸ್ತುಗಳ, ಅಥವಾ ಸಂದರ್ಭದ ಸಾಮರ್ಥ್ಯವನ್ನು ಅಥವಾ ಗುಣವನ್ನು ತೋರಿಸುತ್ತದೆ. ಮನರಂಜನೆ ಅಥವಾ ಮನುಷ್ಯನ ಸಂವಹನ ಸಾಧನ, ಅಥವಾ ಜನರನ್ನು ನಗುವಂತೆ ಮಾಡುವ, ಅಥವಾ ಆನಂದದಿಂದ ಇರುವಂತೆ ಮಾಡುವ ಬಗೆಗಳನ್ನು ಈ ಪದವು ಒಳಗೊಳ್ಳುತ್ತದೆ.



Downloaded From: http://iasexamportal.com

Downloaded From: http://iasexamportal.com

ವಿಮರ್ಶೆಯು ನಿರ್ಣಯದ ಅಥವಾ ವಿಶ್ಲೇಷಣೆಯ ಒಂದು ಕ್ರಿಯೆ. ರಚನಾತ್ಮಕ ವಿಮರ್ಶೆಯನ್ನು, ಒಬ್ಬ ಮನುಷ್ಯನು ಇನ್ನೊಬ್ಬನ ವರ್ತನೆಯನ್ನು ಪ್ರಭುತ್ವವಾದಿ ಅಲ್ಲದ ರೀತಿಯಲ್ಲಿ ತಿದ್ದುವ ಒಂದು ಬಗೆಯ ಸಂವಹನ ಕ್ರಿಯೆ ಎನ್ನಬಹುದು. ಸಾಮಾನ್ಯವಾಗಿ ಇದನ್ನು, ಇನ್ನೊಬ್ಬ ಮನುಷ್ಯನ ವರ್ತನೆಯು ಸಾಮಾಜಿಕವಾಗಿ ತಪ್ಪಾಗಿದ್ದಾಗ ಅದನ್ನು ಸರಿಪಡಿಸುವ ಜಾಣ್ಮೆಯ ವಿಧಾನ ಎನ್ನಬಹುದು. ಇದು 'ಆಜ್ಞೆ' ಅಥವಾ 'ನಿಂದನೆ'ಗೆ ವಿರುದ್ಧವಾದ 'ರಚನಾತ್ಮಕ' ಕ್ರಿಯೆ. ಶಾಂತಿ ಮತ್ತು ದಯಾಶೀಲ ವಿಧಾನದಿಂದ ಸರಿ ಮಾಡುವುದಕ್ಕಾಗಿಯೇ ಇದು ಇದೆ.

'ವ್ಯಂಗ್ಯೋಕ್ತಿ'ಯು ವಿಮರ್ಶಕನು ಬಳಸುವ ಇನ್ನೊಂದು ಸಾಧನ. ಇದು ವಾಡಿಕೆಯಲ್ಲಿ ಜಾಣತನ ಮತ್ತು ವಿನೋದದಿಂದ ಕೂಡಿದ್ದರೂ, ಇದರ ಮುಖ್ಯ ಉದ್ದೇಶವು ಒಂದು ಘಟನೆಯನ್ನು ಅಥವಾ ವ್ಯಕ್ತಿಯನ್ನು ಅಥವಾ ಒಂದು ಸಮೂಹವನ್ನು ಜಾಣತನದಿಂದ ಮಾಡುವ ವಿಮರ್ಶೆಯೇ ಹೊರತು ವಿನೋದವಲ್ಲ.

ವ್ಯಂಗ್ಯೋಕ್ತಿ ಅಥವಾ ವಿಡಂಬನೆಯು ಖಚಿತವಾದ ಸಾಹಿತ್ಯ ಅರ್ಥವನ್ನು ಒಳಗೊಂಡಿದೆ. ಅದಕ್ಕೆ–ಒಬ್ಬ ವ್ಯಕ್ತಿ, ಅಥವಾ ಜನಸಮುದಾಯ, ಒಂದು ವಿಚಾರ ಅಥವಾ ಪ್ರವೃತ್ತಿ; ಒಂದು ಸಂಸ್ಥೆ ಅಥವಾ ಸಾಮಾಜಿಕ ನಡವಳಿಕೆ – ಹೀಗೆ ಖಚಿತವಾದ ಗುರಿ ಇದೆ. ಏನೇ ಆದರೂ ಈ ಗುರಿಯನ್ನು ಭೇದಿಸುವುದು ಇದರ ಕ್ರಿಯೆ.

ವ್ಯಂಗ್ಯೋಕ್ತಿಯು ಸಿಟ್ಟು ಮತ್ತು ವಿನೋದವನ್ನು ಯಾವಾಗಲೂ ಜೋಡಿಸುವುದರಿಂದ ಅದು ಮನಸ್ಸನ್ನು ಕದಡುವಂಥದ್ದಾಗಿರುತ್ತದೆ. ಅದು ತನ್ನ ಸತ್ವದಲ್ಲಿ ವ್ಯಂಗ್ಯದಿಂದ ಕೂಡಿರುವುದರಿಂದ, ಮತ್ತು ಈ ವ್ಯಂಗ್ಯವು 'ಕಟೂಕ್ತಿ'ಯೆಂಬ ಘನವಾದ ಹೊಡೆತ ಉಳ್ಳ ಶಕ್ತಿ ಹೊಂದಿರುವುದರಿಂದ, ಯಾವಾಗಲೂ ತಪ್ಪು ತಿಳಿವಳಿಕೆಗೆ ದಾರಿ ಮಾಡಿಕೊಡುತ್ತದೆ.

ಮನುಷ್ಯನ ಅಥವಾ ವ್ಯಕ್ತಿಯ ದುರ್ಗುಣಗಳು, ತಪ್ಪುಗಳು, ದುರ್ನಡತೆ ಮತ್ತು ಮಿತಿಗಳನ್ನು ಛೇಡನೆ, ಅಣಕ, ತಮಾಷೆ, ವ್ಯಂಗ್ಯ ಅಥವಾ ಇನ್ನುಳಿದ ವಿಧಾನಗಳಿಂದ ಹೀಗಳೆಯುವ ಮೂಲಕ ಅವನಲ್ಲಿ ಸುಧಾರಣೆಯನ್ನು ತರುವ ಆಶಯವನ್ನು ಹೊಂದಿರುವ ಒಂದು ಕಲಾಕೃತಿ ಇದು. ಸಾಹಿತ್ಯ ಮತ್ತು ನಾಟಕಗಳು ಇದರ ಪ್ರಮುಖ ವಾಹಕಗಳು; ಆದರೆ ಇದು ಫಿಲಂಗಳು, ದೃಶ್ಯ ಕಲೆ ಮತ್ತು ರಾಜಕೀಯ ಕಾರ್ಟೂನುಗಳಲ್ಲಿಯೂ ಕಾಣಿಸಿಕೊಳ್ಳುತ್ತದೆ. ಹೊರೆಸನ ಪ್ರಕಾರ–ವಿಡಂಬನಕಾರನು–ಎಲ್ಲೆಲ್ಲಿಯೂ ತಪ್ಪನ್ನು ಕಾಣುವ, ಆದರೆ ಅತೀವ ಕೋಪದ ಬದಲಿಗೆ, ನಸುನಗುವನ್ನು ಸಾಧಿಸುವ ಜಗತ್ತಿನ ನಾಗರಿಕ ಮನುಷ್ಯ.

**Q. 6 (a)** ಈ ಕೆಳಗಿನವುಗಳ ಸಂಧಿಯ ಸ್ವರೂಪವನ್ನು ಗುರುತಿಸಿ :— **2×5=10**

(i) ಸೊಗಯಿಸು 2

(ii) ಪಳಗನ್ನಡ 2

(iii) ಪೊನ್ನುಳ್ಳಂ 2

(iv) ಮಾತೆಲ್ಲಂ 2

(v) ಈವೊಕ್ಕಲ್ 2

**Q. 6 (b)** ಈ ಕೆಳಗಿನ ಕನ್ನಡ ಪದಗಳು ಸಂಸ್ಕೃತ ಮೂಲಸ್ವರೂಪ ಏನು? **2×5=10**

(i) ದಾಡೆ 2

(ii) ಸೆಜ್ಜೆ 2

(iii) ಆಣೆ 2

(iv) ಜೊನ್ನ 2

(v) ನೇಹ 2



Downloaded From: http://iasexamportal.com

Downloaded From: http://iasexamportal.com

**Q. 6(c)** ಈ ಕೆಳಗಿನ ಛಂದೋಸ್ವರೂಪವನ್ನು ವಿವರಿಸಿ :- **2×5=10**

(i) ಲಲಿತರಗಳೆಯ ಮಾತ್ರಾಗಣದ ಸ್ವರೂಪ ಏನು ? 2

(ii) ಶರಷಟ್ಪದಿಯ ಮಾತ್ರೆಗಳ ವಿವರ ಕೊಡಿ. 2

(iii) ತ್ರಿಪದಿಯ ಲಕ್ಷಣವನ್ನು ವಿವರಿಸಿ. 2

(iv) ಸಾಂಗತ್ಯದ ಲಕ್ಷಣವನ್ನು ತಿಳಿಸಿ. 2

(v) 'ಸಾನೆಟ್'ನ ಲಕ್ಷಣವೇನು ? 2

**Q. 6(d)** ಈ ಕೆಳಗಿನವುಗಳನ್ನು ಹೇಳಿದ ಕವಿ/ವ್ಯಾಕರಣಕಾರ/ಮೀಮಾಂಸಕರನ್ನು ಗುರಿತಿಸಿ :- **2×5=10**

(i) ಯತಿ ವಿಲಂಘನದಿಂದರಿದಲ್ತೆ ಕನ್ನಡಂ. 2

(ii) ನೋಡುವೊಡೊಂದಕ್ಕರಮದು, ಮಾಡುವೊಡೆ ಉಚ್ಚರಣೆಗೆ ಅರಿದು ಮೂರುಂ ತೆರನಂ. 2


(iii) ಒಪ್ಪುವ ಕನ್ನಡದೊಳ್ ಸ್ವಭಾವದಿಂ ಕೆಲವು ಮಹಾಪ್ರಾಣಂಗಳೊಳವು. 2

(iv) 'ರೂಢಿವಶದಿಂ ಸಲೆ ಸಲ್ವುದು ಇದಲ್ತೆ, ಶಿಷ್ಟ ಸಂಭಾವಿತಮಪ್ಪ, ಕಾವ್ಯಸಮಯಂ'. 2

(v) ಶಬ್ದಾರ್ಥೌ ಸಹಿತೌ ಕಾವ್ಯಂ. 2



Downloaded From: http://iasexamportal.com




## What you will get:


- 100% G.S. Syllabus Covered
- 8+ Booklets
- More Than 2500+ Pages
- Guidance & Support from Our Experts

## Our Objectives:

- Firstly to cover 100% civil service Mains examination (IAS) syllabus.
- Secondly to compile all the required study materials in a single place, So to save the precious time of the aspirants.

For More Information Click below Link

http://iasexamportal.com/civilservices/study-kit/gs-mains




# Online Coaching for IAS Mains General Studies I, II, III & IV (Combo)

## What you will Get (?)

- **General Studies (Paper – I, II, III & IV) Online 100 % Reading Material of the Syllabus (Which can be saved easily)**
- **Slides (For Giving Summary of Each Topics)**
- **Categorized Unit and Sub-Unit Wise Question Papers of General Studies**
- **Current General Studies Magazine (Indispensable Magazine for General Studies)**
- **Daily Answer Writing Challenge for IAS Mains Contemporary Issues**
- **It is full of tips on areas of emphasis, caution while reading and writing , how to write the answer (?) .**
- **Model Test Question Paper for General Studies - I, II, III and IV for Mains Exam 2015**
- **Online and Telephonic interaction with the course director, and continuous evaluation through a regular online writing session in every chapter and topic.**

For More Information Click below Link

http://iasexamportal.com/civilservices/courses/ias-mains-gs-combo




# G.S. FOUNDATION COURSE (PRELIMINARY+ MAINS)

---

**Dear Aspirants,**
The Indian Civil Services examination is conducted by the Union Public Service Commission (UPSC) every year.

The competitive examination comprises of three stages :

- Preliminary Examination – (Objective Test)
- Main Examination (Written )
- Interview Test

The examination schedule is announced during January - February.

The Preliminary held in May-June and the results are announced in July-August.

The Main examination held in October-November and the candidates those who qualify at this stage are invited to the interview in March-April next year.

## We will provide you:

- BOOKS
- STUDY KITS
- MAGAZINES
- Mock Test Papers
- Monthly Magazine- Civil Services Mentor
- Gist of Important Newspapers
- Free Access to Online Coaching at IASEXAMPORTAL
- Previous Year paper’s with solution
- Previous Year question’s trend analysis
- Free Login Access worth Rs 1999 for IAS PRE 2015
- Free Gist Subscription worth Rs 449
- Free Weekly Subscription worth rs 399
- TELEPHONIC/EMAIL GUIDANCE WITH COURSE CO-ORDINATOR

**For More Information Click Given below link:**

http://iasexamportal.com/civilservices/study-kit/ias-pre/general-studies-foundation-course